### ಕಾಂಪೋಸ್ಟ್ ತೊಟ್ಟಿಯಿಂದಾಗುವ ಉಪಯೋಗಗಳು

ಗುಂಡಿಯಿಂದ ತಯಾರಿಸುವ ಕಾಂಪೋಸ್ಟ್‌ನಲ್ಲಿ ಉಷ್ಣಾಂಶ ($65^0$ ಡಿಗ್ರಿ – $70^0$ ಡಿಗ್ರಿ ಸೆ.) ಹೆಚ್ಚಾಗಿ ಸಾರಜನಕವು ನೈಟ್ರೇಟ್ ರೂಪದಲ್ಲಿ ನಷ್ಟವಾಗುತ್ತದೆ. ಆದರೆ ತೊಟ್ಟಿಯಿಂದ ತಯಾರಿಸಿದ ಕಾಂಪೋಸ್ಟ್‌ನಲ್ಲಿ ಆ ರೀತಿಯ ನಷ್ಟವನ್ನು ತಡೆಯಬಹುದು. ಅಲ್ಲದೇ, ತೊಟ್ಟಿಯು ಮಣ್ಣಿನ ಮೇಲ್ಭಾಗದಲ್ಲಿ ಇರುವುದರಿಂದ ಆಗಾಗ್ಗೆ ತ್ಯಾಜ್ಯ ವಸ್ತುವನ್ನು ತಿರುಗಿಸಿ, ಕಳಿಯುವಿಕೆಯನ್ನು ಶೀಘ್ರಗೊಳಿಸಬಹುದು.

### ಕಾಂಪೋಸ್ಟ್ ತಯಾರಿಕೆಗೆ ಬೇಕಾದ ವಸ್ತುಗಳು

ಸಾಮಾನ್ಯವಾಗಿ 5 ವಿಧವಾದ ಸಾವಯವ ವಸ್ತುಗಳನ್ನು ಬಳಸಿ ಕಾಂಪೋಸ್ಟ್ ತಯಾರಿಸಬಹುದು. ಸಗಣಿ, ಕೋಳಿ ಸಾಕಾಣಿಕೆಯ ತ್ಯಾಜ್ಯ ವಸ್ತುಗಳು, ಹುಲ್ಲು, ಹಸಿರು ಮತ್ತು ಒಣಗಿದ ಎಲೆ, ಬೆಳೆಯುಳಿಕೆಗಳು, ಕಸದ ಗಿಡಗಳು. ಕೃಷಿಯಾಧಾರಿತ ಕೈಗಾರಿಕೆಗಳಿಂದ ಬಂದ ತ್ಯಾಜ್ಯ ವಸ್ತುಗಳು (ಪ್ರೆಸ್ ಮಡ್, ತರಕಾರಿ ಮತ್ತು ಹಣ್ಣು ಸಂಸ್ಕರಣಾ ಘಟಕದ ವಸ್ತುಗಳು ಇತ್ಯಾದಿ) ಸ್ವಾಭಾವಿಕವಾಗಿ ಒದಗಿಸುವ ಮೂಲ ಪೋಷಕಾಂಶಗಳು (ಶಿಲಾರಂಜಕ) ಪಟ್ಟಣದ ಪ್ರದೇಶಗಳಲ್ಲಿ ದೊರೆಯುವ ಸೇಂದ್ರಿಯ ತ್ಯಾಜ್ಯ ವಸ್ತುಗಳು ಹಾಗೂ ಇತರೆ ವಸ್ತುಗಳು.

---

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

**ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ**
**ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು,**
**ಕಂಕನಾಡಿ ಅಂಚೆ, ಮಂಗಳೂರು,**
**ದಕ್ಷಿಣ ಕನ್ನಡ – 575002**
www.kvkdk.org, kvkdk@rediffmail.com
0824–2431872

**ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ಭಾ.ಕೃ.ಅ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002**

# ಸುಧಾರಿತ ಕಾಂಪೋಸ್ಟ್ ತಯಾರಿಕೆ ಪದ್ಧತಿಗಳು

**ತಾಂತ್ರಿಕ ಮಾಹಿತಿ:**
**ಮಲ್ಲಿಕಾರ್ಜುನ ಎಲ್., ರಮೇಶ ಟಿ. ಜೆ., ನವೀನ್‌ಕುಮಾರ್ ಬಿ. ಟಿ.,**
**ಚೇತನ್ ಎನ್. ಕೇದಾರನಾಥ, ಮತ್ತು ರಶ್ಮಿ ಆರ್.**

ಆಧುನಿಕ ಕೃಷಿಯಲ್ಲಿ ಭೂಮಿಯಿಂದ ಹೆಚ್ಚು ಉತ್ಪಾದನೆ ತೆಗೆಯಬೇಕೆಂಬ ಉತ್ಕಟ ಆಕಾಂಕ್ಷೆಯಿಂದಾಗಿ ಕೋಟ್ಯಾನುಕೋಟಿ ವರ್ಷಗಳಿಂದ ಮಾನವನ ಎಲ್ಲಾ ಅವಶ್ಯಕತೆಗಳನ್ನು ಪೂರೈಸುತ್ತಿರುವ ರೈತನ ಪಾಲಿನ ಅಕ್ಷಯ ಪಾತ್ರೆಯಾದ ಮಣ್ಣನ್ನು ಮಾನವ ಅತೀವ ಬೇಸಾಯ ಕ್ರಮಗಳಿಂದಾಗಿ ಬರಡಾಗಿಸಿದ್ದಾನೆ ಎಂದರೆ ಅತಿಶಯೋಕ್ತಿಯಲ್ಲ. ತೀವ್ರತರ ಬೇಸಾಯ, ಆಳವಾದ ಉಳುಮೆ, ರಸಗೊಬ್ಬರಗಳ ಅತಿಯಾದ ಬಳಕೆ, ಭೂಮಿಗೆ ಚೈತನ್ಯದಾಯಕವೆನಿಸಿದ ಸೂಕ್ಷ್ಮಜೀವಿಗಳ ಅಭಿವೃದ್ಧಿ ಪೂರಕವಾದ ಸಾವಯವ ಗೊಬ್ಬರಗಳ ಮಿತಬಳಕೆ, ಬೆಳೆಗಳಿಗೆ ಕಂಟಕವೆನಿಸುವ ಕಳೆ, ಕೀಟ ಮತ್ತು ರೋಗಗಳ ಧಮನಕ್ಕಾಗಿ ಅತಿಯಾದ ರಾಸಾಯನಿಕಗಳ ಬಳಕೆ ಇವುಗಳಿಂದ ನಿಸ್ಸಾರಗೊಳಿಸಿದ್ದಾನೆ. ಪರಿಸರದ ನಾಶಕ್ಕೆ ತಾನಾಗಿಯೇ ಕಾರಣನಾಗಿ ಇದೀಗ ವಿನಾಶದ ಎಚ್ಚರಿಕೆಯ ಕರೆಗಂಟೆ ಬಾರಿಸುತ್ತಿರುವಾಗ ತನ್ನ ತಪ್ಪಿನ ಅರಿವು ಉಂಟಾಗುತ್ತಿರುವುದು ಸಮಾಧಾನಕರ ಅಂಶ.

### ಅ. ನಾಡೆಪ್ ಪದ್ಧತಿ

ಈ ಪದ್ಧತಿಯಿಂದ 1 ಕಿ.ಗ್ರಾಂ ಸಗಣಿಯಿಂದ 20–30 ಕಿ.ಗ್ರಾಂ ವರೆಗೆ ಕಾಂಪೋಸ್ಟ್ ತಯಾರಿಸಬಹುದು. ಈ ಪದ್ಧತಿಯಿಂದ ಲಭ್ಯವಿರುವ ಕಡಿಮೆ ಸಗಣಿಗೆ ಹೆಚ್ಚಿನ ಕೃಷಿ ತ್ಯಾಜ್ಯ ವಸ್ತುಗಳು ಹಾಗೂ ಮಣ್ಣನ್ನು ಬಳಸಿ ಹೆಚ್ಚಿನ ಪೋಷಕಾಂಶವಿರುವ ಕಾಂಪೋಸ್ಟ್‌ನ್ನು ತಯಾರಿಸಬಹುದು. ಈ ವಿಧಾನದಿಂದ 10 x 6 x 3 ಅಡಿ ಅಥವಾ 12 x 5 x 3 ಅಡಿ ಉದ್ದ, ಅಗಲ ಮತ್ತು ಎತ್ತರದ ತೊಟ್ಟಿಯನ್ನು ಹೆಚ್ಚಿನ ಗಾಳಿಯಾಡುವ ರೀತಿಯಲ್ಲಿ ಕಟ್ಟಬೇಕು. ಕೆಳಗಿನ 9 ಅಂಗುಲದವರೆಗೆ ಗುಂಡಿಯಲ್ಲಿ ಗಟ್ಟಿಯಾದ ತಳಪಾಯ ವಿರಬೇಕು. ತೊಟ್ಟಿಯ ಕೆಳಭಾಗದಲ್ಲಿ ಇಟ್ಟಿಗೆಯ ಪದರ ಮತ್ತು ತೊಟ್ಟಿಯ ಮೇಲ್ಭಾಗದಲ್ಲಿ ಛಾವಣಿ ಇರಬೇಕು.







**ಕಾಂಪೋಸ್ಟ್ ತೊಟ್ಟಿಗೆ ವಸ್ತುಗಳನ್ನು ತುಂಬುವುದರಲ್ಲಿ ಎರಡು ವಿಧಾನಗಳಿವೆ**

**ಪುನರಾವರ್ತಿತ ಪದರ ಪದ್ಧತಿ**

ಈ ವಿಧಾನದಲ್ಲಿ ತ್ಯಾಜ್ಯ ವಸ್ತುಗಳು, ಸಗಣಿಯ ದ್ರಾವಣ ಮತ್ತು ಮಣ್ಣನ್ನು ಪದರ ಪದರವಾಗಿ ಪ್ರತಿ ದಿನವು ತುಂಬಬೇಕು. ಈ ವಸ್ತುಗಳ ಪ್ರಮಾಣವನ್ನು (5:45:50 ರ ಪ್ರಮಾಣದಲ್ಲಿ ಸಗಣಿ : ತ್ಯಾಜ್ಯ ವಸ್ತು ಮತ್ತು ಮಣ್ಣು) ನಿಗದಿಪಡಿಸಿದ ಅನುಪಾತದ ರೀತಿಯಲ್ಲಿ ಹಾಕಬೇಕು. ಇದರಲ್ಲಿ ತುಂಬುವಿಕೆ ಕಷ್ಟವೆನಿಸಿದರು ಶೀಘ್ರದಲ್ಲಿ ಕಳಿಯುತ್ತದೆ.

**ಕಂತಿನ ರೂಪದಲ್ಲಿ ತುಂಬುವಿಕೆ**

ಮೊದಲನೆ ಕಂತಿನ ಪ್ರತಿ ಪದರದಲ್ಲಿ 63 ಕಿ.ಗ್ರಾಂ ತ್ಯಾಜ್ಯ ವಸ್ತು, 100 ಲೀ. ನೀರಿನಲ್ಲಿ 7 ಕಿ.ಗ್ರಾಂ ಸಗಣಿ ಕರಗಿಸಿದ ದ್ರಾವಣ ಮತ್ತು 70 ಕಿ.ಗ್ರಾಂ ಮಣ್ಣನ್ನು ಸೇರಿಸಬೇಕು. ಈ ರೀತಿಯ 13 ಪದರಗಳನ್ನು ಹಾಕಬೇಕು. ಎರಡನೇ ಕಂತಿನಲ್ಲಿ ಪ್ರತಿ ಪದರದಲ್ಲಿ 45 ಕಿ.ಗ್ರಾಂ. ತ್ಯಾಜ್ಯವಸ್ತು, 5 ಕಿ.ಗ್ರಾಂ ಸಗಣಿಯನ್ನು 70 ಲೀ. ನೀರಿನಲ್ಲಿ ಕರಗಿಸಿದ ದ್ರಾವಣ ಹಾಗೂ 50 ಕಿ.ಗ್ರಾಂ. ಮಣ್ಣನ್ನು ಹಾಕಬೇಕು. ಎರಡನೇ ಕಂತನ್ನು ಮೊದಲನೇ ಕಂತು ತುಂಬಿದ 15 ದಿವಸಗಳ ನಂತರ ಮಾಡಬೇಕು. ವಾರಕ್ಕೆರಡು ಬಾರಿ 50 ಲೀ.ನಂತೆ ನೀರು ಚಿಮುಕಿಸಬೇಕು. ಬೇಸಿಗೆಯಲ್ಲಿ ಹೆಚ್ಚು ನೀರು ಬೇಕಾಗಬಹುದು. ಕಂತಿನ ಪದ್ಧತಿಯಲ್ಲಿ 100–120 ದಿವಸಗಳಲ್ಲಿ ಗೊಬ್ಬರ ತಯಾರಾಗುತ್ತದೆ. ಪ್ರತಿ ಬಾರಿ 3 ರಿಂದ 3.5 ಟನ್ ಕಾಂಪೋಸ್ಟ್ ಗೊಬ್ಬರ ಸಿಗುತ್ತದೆ. ಒಂದು ತೊಟ್ಟಿಯಿಂದ ವರ್ಷಕ್ಕೆ 9 ರಿಂದ 10 ಟನ್‌ಗಳಷ್ಟು ಗೊಬ್ಬರ ತಯಾರಾಗುತ್ತದೆ.



**ಆ. ಜಪಾನ್ ಮಾದರಿ ಕಾಂಪೋಸ್ಟ್ ತಯಾರಿಕೆ**

ಜಪಾನ್ ಮಾದರಿಯ ಕಾಂಪೋಸ್ಟ್ ತಯಾರಿಕೆಯಲ್ಲಿ ಗುಂಡಿ ಬದಲಾಗಿ ಕಲ್ಲಿನಿಂದ ಮಾಡಲಾದ ಅಥವಾ ಬಿದಿರುಗಳಿಂದ ಮಾಡಲಾದ ತೊಟ್ಟಿಯನ್ನು ಕಟ್ಟಲಾಗುತ್ತದೆ. ಸಾಮಾನ್ಯವಾಗಿ ತೊಟ್ಟಿಯ ಅಳತೆಯು 18 ರಿಂದ 30 ಅಡಿ ಉದ್ದ 3 ರಿಂದ 4 ಅಡಿ ಎತ್ತರವಿರುತ್ತದೆ. ಕಲ್ಲಿನ ಗೋಡೆಯನ್ನು ಹೊಂದಿಸುವಾಗ ಕಲ್ಲಿನ ಸಂದಿಯಿಂದ ಸಾಕಷ್ಟು ಗಾಳಿಯಾಡುವಂತೆ ಎಚ್ಚರವಹಿಸಬೇಕು. ತೊಟ್ಟಿಯ ತಳಭಾಗವನ್ನು ಚಪ್ಪಡಿ ಕಲ್ಲಿನಿಂದ ಹೊದಿಸುವುದರಿಂದ ಪೋಷಕಾಂಶಗಳ ಬಸಿಯುವಿಕೆಯನ್ನು ತಡೆಯಬಹುದು. ಈ ರೀತಿಯ ಕಲ್ಲಿನ ತೊಟ್ಟಿಯನ್ನು ಕಟ್ಟಲು ಅಂದಾಜು ರೂ. 5,000ಗಳು ಬೇಕಾಗುತ್ತದೆ. ಇದು ದುಬಾರಿಯಾದಲ್ಲಿ ತೊಟ್ಟಿಯನ್ನು ಸ್ಥಳೀಯವಾಗಿ ದೊರೆಯುವ ವಸ್ತುಗಳಿಂದಲೂ ಸಹ ಕಟ್ಟಬಹುದು.